**<u>4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ</u>**

**ಎಸ್. ಸಿ. ನಂ. 27/2022**

**ಪಿ ಡಬ್ಲ್ಯೂ: 1**

**ಸಿ ಡಬ್ಲ್ಯೂ: 1**

| | | |
|---|---|---|
| ಸಾಕ್ಷಿದಾರರ ಹೆಸರು | : | ತನುಜಾ |
| ತಂದೆಯ ಹೆಸರು | : | ಪರಶುರಾಮ ಸುಣಗಾರ |
| ವಯಸ್ಸು | : | 22 ವರ್ಷಗಳು |
| ಉದ್ಯೋಗ | : | ಗಾರ್ಮೆಂಟ್ಸ ಕೆಲಸ |
| ವಾಸಸ್ಥಳ | : | ಧಾರವಾಡ |

ದಿನಾಂಕ: 25-09-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ:</u>**

ಧಾರವಾಡದ ಲೈನ ಬಜಾರದ ಕೋರವರ ಓಣಿಯಲ್ಲಿ ನನ್ನ ಮನೆ ಇದೆ. ನಮ್ಮ ಮನೆಯಲ್ಲಿ ನಾನು, ನನ್ನ ತಂದೆ-ತಾಯಿ ಮತ್ತು ನನ್ನ ಮೂರು ಜನ ಅಕ್ಕಂದಿರು ವಾಸ ಇದ್ದೇವೆ. ನನ್ನ ತಂದೆ ಬಾಳೆಹಣ್ಣಿನ ವ್ಯಾಪಾರ ಮಾಡುತ್ತಾರೆ. ವ್ಯಾಪಾರ ಮಾಡಲು ಬೆಳಿಗ್ಗೆ 11.30 ಗಂಟೆಗೆ ಹೋದರೆ ರಾತ್ರಿ 8.30 ಗಂಟೆಗೆ ಬರುತ್ತಾರೆ. ನನಗೆ ಆರೋಪಿಯ ಪರಿಚಯ ಇದೆ. ಆರೋಪಿಯು ನನಗೆ 2020 ನೇ ಸಾಲಿನಿಂದ ಪರಿಚಯ ಇದ್ದಾರೆ. ಆರೋಪಿಯು ನನ್ನ ಅಕ್ಕ ಕವಿತಾಳ ಗೆಳತಿಯ ಗೆಳೆಯ ಇದ್ದಾರೆ. 4-5 ವರ್ಷಗಳ ಹಿಂದೆ ನನ್ನ ಅಕ್ಕಳ ಗೆಳತಿ

ಆರೋಪಿಯನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದರು, ಆರೋಪಿಯು ನಮ್ಮ ಅಕ್ಕಳಿಗೆ ಕೆಲಸ ಕೊಡಿಸುತ್ತೇನೆ ಅಂತಾ ಹೇಳಿದ್ದರಿಂದ ಆರೋಪಿಯು ನಮ್ಮ ಮನೆಗೆ ಬಂದಿದ್ದನು. ಆಗ ನನಗೆ ಆರೋಪಿಯ ಪರಿಚಯ ಆಗಿದೆ. ಅವನು ನನಗೆ ಕೆಲಸ ಕೊಡಿಸುತ್ತೇನೆ ಅಂತಾ ಹೇಳಿದನು. ನಂತರ ಆರೋಪಿಯು ನನ್ನ ಜೊತೆ ಪೋನ ಸಂಪರ್ಕದಲ್ಲಿ ಇದ್ದನು. ಆರೋಪಿಯು ನನ್ನನ್ನು ಮದುವೆ ಆಗುತ್ತೇನೆ ಅಂತಾ ಹೇಳಿ ನನಗೆ ಪೋನನಲ್ಲಿ ಮೇಸೇಜ್ ಮಾಡುವುದನ್ನು ಮುಂದುವರೆಸಿದನು, ನಂತರ ನಮ್ಮಿಬ್ಬರ ಮಧ್ಯ ಪ್ರೀತಿ ಆಯಿತು. 2-3 ವರ್ಷದಿಂದ ನಮ್ಮಿಬ್ಬರ ಮಧ್ಯ ಪ್ರೀತಿ ಆಯಿತು. ನಂತರ ಆರೋಪಿಯು ನನ್ನನ್ನು ಕೆಲಸ ಕೊಡಿಸುತ್ತೇನೆ ಅಂತಾ ಹೇಳಿ ಕೊಲ್ಲಾಪೂರಕ್ಕೆ ಕರೆದುಕೊಂಡು ಹೋದನು, ಮತ್ತು ನನ್ನನ್ನು ಧಾರವಾಡಕ್ಕೆ ಬರಲು ಬಿಡಲಿಲ್ಲ, ನನ್ನ ಮೊಬೈಲ ಪೋನನ್ನು ಕೂಡಾ ಕಸಿದುಕೊಂಡಿದ್ದನು. ಆ ರೀತಿ ಆರೋಪಿಯು ನನ್ನನ್ನು ಒಂದು ವರ್ಷಗಳ ಕಾಲ ಕೊಲ್ಲಾಪೂರದಲ್ಲಿ ನನ್ನನ್ನು ತನ್ನ ಜೊತೆ ಇಟ್ಟುಕೊಂಡಿದ್ದನು. ನನ್ನ ಅಕ್ಕ ನನ್ನ ಮೊಬೈಲ್ಗೆ ಪೋನ ಮಾಡಿದರೆ ಆರೋಪಿಯು ಕೊಲ್ಲಾಪೂರದಲ್ಲಿ ಕೆಲಸ ಮಾಡುತ್ತಿದ್ದೇನೆ ಅಂತಾ ಹೇಳು ಮತ್ತು ಅವನು ನನ್ನ ಜೊತೆ ಇಲ್ಲ ಅಂತಾ ಹೇಳಬೇಕು ಅಂತಾ ಹೇಳುತ್ತಿದ್ದನು ಮತ್ತು ಚಾಕು ತೋರಿಸಿ ನನಗೆ ಹೆದರಿಸುತ್ತಿದ್ದನು ಮತ್ತು ಪೋನನಲ್ಲಿ ಮಾತನಾಡುವಾಗ ಮುಂದೆಯೇ ಕೂಡುತ್ತಿದ್ದನು. ಅದಕ್ಕಾಗಿ ನಾನು ಹೆದರಿ ಆರೋಪಿಯೊಂದಿಗೆ ವಾಸ ಇರುವ ಬಗ್ಗೆ ನನ್ನ ತಂದೆ-ತಾಯಿಗೆ ಹೇಳಲಿಲ್ಲ. ಆರೋಪಿಯು ಕೊಲ್ಲಾಪೂರದಲ್ಲಿದ್ದಾಗ ಸಾಲ ಮಾಡಿಕೊಂಡಿದ್ದನು, ಒಂದು ವರ್ಷದ ನಂತರ

ಕರೋನಾ ಬಂದ ಕಾರಣ ಅಲ್ಲಿ ಯಾವುದೇ ಕೆಲಸ ಸಿಗದಿದ್ದಾಗ ನನ್ನನ್ನು ಧಾರವಾಡದ ಕಮಲಾಪೂರಕ್ಕೆ ಕರೆದುಕೊಂಡು ಬಂದನು ಮತ್ತು ನಾವು ಒಂದು ಬಾಡಿಗೆ ಮನೆಯಲ್ಲಿ ಇದ್ದೆವು. ಆರೋಪಿಯು ಆ ಮನೆಯಲ್ಲಿದ್ದಾಗ ಸಹ ನನಗೆ ಕುಡಿದು ಬಂದು ಹೊಡಿ-ಬಡಿ ಮಾಡುತ್ತಿದ್ದನು ಮತ್ತು ಮನೆಗೆ ಯಾವುದೇ ಕಿರಾಣಿ ಸಮಾನುಗಳನ್ನು ತರುತ್ತಿರಲಿಲ್ಲ. ನಾವು ಕಮಲಾಪೂರದಲ್ಲಿ ಬಾಡಿಗೆ ಮನೆಯಲ್ಲಿ ಇರಲು ಪ್ರಾರಂಭ ಮಾಡಿದ ಮೂರು ತಿಂಗಳ ನಂತರ ಆರೋಪಿಯು ನನಗೆ ಕುಡಿದು ಬಂದು ಹೊಡಿ-ಬಡಿ ಮಾಡಿದ್ದರಿಂದ ನನಗೆ ಆರೋಗ್ಯಕ್ಕೆ ತೊಂದರೆ ಆಯಿತು ಮತ್ತು ಆರಾಮ ಇಲ್ಲದಿದ್ದಾಗ ನಾನು ಒತ್ತಾಯವಾಗಿ ಆರೋಪಿಯಿಂದ ಫೋನ ಕಸಿದುಕೊಂಡು ನನ್ನ ತಾಯಿಗೆ ಫೋನ ಮಾಡಿ ವಿಷಯ ತಿಳಿಸಿದೆನು. ನನ್ನ ತಾಯಿಯು ನನಗೆ ಧಾರವಾಡದ ಸಿಬಿಟಿ ಬಸ ಸ್ಟ್ಯಾಂಡಗೆ ಬರಲು ಹೇಳಿದರು, ನಾನು ಅಲ್ಲಿಗೆ ಹೋದೆನು. ನಂತರ ನಾನು ನನ್ನ ತಾಯಿಯ ಮನೆಗೆ ಹೋದೆನು. 15 ದಿನಗಳು ಆದ ಮೇಲೆ ಆರೋಪಿಯು ನನಗೆ ಫೋನ ಮಾಡಿ ನಿನಾಗಿ ವಾಪಸ್ಸು ಬಾ ಇಲ್ಲವಾದರೆ ಮನೆಗೆ ಬಂದು ಗಲಾಟೆ ಮಾಡಿ ಮರ್ಯಾದೆ ತೆಗೆಯುತ್ತೇನೆ ಅಂತಾ ಹೇಳಿದನು. ನಂತರ ಆರೋಪಿಯು ದಿನಾಂಕ:21-02-2022 ರಂದು ಬೆಳಿಗ್ಗೆ 11.00 ಗಂಟೆ ಸುಮಾರಿಗೆ ಮನೆಯಲ್ಲಿ ನಾನು ಒಬ್ಬಳೆ ಇದ್ದನು ಮತ್ತು ನನ್ನ ತಂದೆ ಸಿಲೆಂಡರ ತರಲು ಹೊರಗೆ ಹೋಗಿದ್ದರು ಆಗ ಆರೋಪಿಯು ನಮ್ಮ ಮನೆಗೆ ಬಂದು ಬಾಗಿಲನ್ನು ಬಡಿದನು, ನಾನು ನನ್ನ ತಂದೆ ಬಂದಿರಬಹುದು ಅಂತಾ ಬಾಗಿಲು ತೆಗೆದೆನು. ಆರೋಪಿಯು ಒಳಗೆ ಬಂದು ನನಗೆ ಹೊಡೆಯಲು ಪ್ರಾರಂಭಿಸಿ ಅವಾಚ್ಯ ಶಬ್ದಗಳಾದ ಹಾದರಗಿತ್ತಿ, ಹಡಸು ಅಂತಾ ಬೈದನು ಮತ್ತು

ಕೈಯಿಂದ ಕಪಾಳಗೆ ಹೊಡೆದನು ಮತ್ತು ನನ್ನನ್ನು ಹೊರಗೆ ಎಳೆದುಕೊಂಡು ಹೋಗುತ್ತಿದ್ದಾಗ ನಮ್ಮ ಮನೆಯಲ್ಲಿ ಬಾಡಿಗೆಗೆ ಇದ್ದ ಅಂಬಿಕಾ ಕಟ್ಟಿಮನಿ ಎನ್ನುವವರು ಬಂದು ಗಲಾಟೆ ಬಿಡಿಸಲು ಪ್ರಯತ್ನ ಮಾಡಿದರು, ಆರೋಪಿ ಅವರ ಮಾತು ಕೇಳಲಿಲ್ಲ. ಆರೋಪಿಯು ನನ್ನನ್ನು ಬಿಟ್ಟು ಹೋಗುತ್ತಿರುವಂತೆ ಸ್ವಲ್ಪ ಮುಂದೆ ಹೋಗಿ ಮತ್ತೆ ವಾಪಸ್ಸು ಬಂದು ಚಾಕುವಿನಿಂದ ಹೊಟ್ಟೆಗೆ ಹಾಕಲು ಬಂದನು, ಆಗ ಚಾಕು ನನ್ನ ಎಡಗಾಲಿನ ತೊಡೆಗೆ ಚುಚ್ಚಿತ್ತು ಮತ್ತು ಅಲ್ಲಿ ರಕ್ತ ಬರಲು ಪ್ರಾರಂಭವಾಯಿತು. ಆರೋಪಿಯು ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ಚಾಕುವಿನಿಂದ ಚುಚ್ಚಿದ್ದಾನೆ. ಆರೋಪಿಯು ನನಗೆ ಚಾಕುವಿನಿಂದ ಚುಚ್ಚಿ ಅಲ್ಲಿಂದ ಓಡಿ ಹೋದನು.

2. ನಂತರ ನನ್ನ ತಂದೆ ಬಂದರು. ನನ್ನ ತಂದೆಗೆ ನಾನು ವಿಷಯವನ್ನು ತಿಳಿಸಿದೆನು. ನನ್ನ ತಂದೆ ನನ್ನನ್ನು ಧಾರವಾಡದ ಸಿವಿಲ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋದರು. ಆಸ್ಪತ್ರೆಯಲ್ಲಿ ನನಗೆ ಆದ ಗಾಯಕ್ಕೆ ಆರು ಹೊಲಿಗೆಗಳನ್ನು ಹಾಕಿದ್ದಾರೆ. ನಂತರ ಅದೇ ದಿನ ಧಾರವಾಡದ ಶಹರ ಪೋಲೀಸ ಠಾಣೆಯಲ್ಲಿ ನಾನು ದೂರನ್ನು ಕೊಟ್ಟಿದ್ದೇನೆ. ಈಗ ನನಗೆ ತೋರಿಸುತ್ತಿರುವ ಪಿರ್ಯಾದು ಅದೇ ಇದೆ. ಪಿರ್ಯಾದನಲ್ಲಿನ ವಿಷಯವನ್ನು ನಾನೇ ಬರೆದಿದ್ದೇನೆ. ಈಗ ನನಗೆ ತೋರಿಸುತ್ತಿರುವ ಪಿರ್ಯಾದು ಅದೇ ಇದೆ. ಸದರಿ ಪಿರ್ಯಾದನ್ನು ನಿ.ಪಿ-1 ಮತ್ತು ಸಾಕ್ಷಿ ಗುರ್ತಿಸಿದ ಅವರ ಸಹಿಯನ್ನು ನಿಪಿ-1(ಎ) ಅಂತಾ ಗುರ್ತಿಸಲಾಯಿತು. ನಂತರ ಮರುದಿನ ಪೋಲೀಸರು ನಮ್ಮ ಮನೆಗೆ ಬಂದರು ನಾನು ಘಟನೆ ಸ್ಥಳವನ್ನು ತೋರಿಸಿದ್ದೇನೆ, ಅಲ್ಲಿ ಪೋಲೀಸರು ಪೋಟೋ ತೆಗೆದರು

ಮತ್ತು ಪಂಚನಾಮೆಯನ್ನು ಮಾಡಿದರು. ಈಗ ನನಗೆ ತೋರಿಸುತ್ತಿರುವ ಪಂಚನಾಮೆ ಅದೇ ಇದೆ. ಸದರಿ ಸ್ಥಳ ಪಂಚನಾಮೆಯನ್ನು ನಿಪಿ-2 ಮತ್ತು ಸಾಕ್ಷಿ ಗುರ್ತಿಸಿದ ಅವರ ಸಹಿಯನ್ನು ನಿ.ಪಿ-2(ಎ) ಅಂತಾ ಗುರ್ತಿಸಲಾಯಿತು. ಈಗ ನನಗೆ ತೋರಿಸುತ್ತಿರುವ ಎರಡು ಪೋಟೋಗಳನ್ನು ಪೋಲೀಸರು ಘಟನಾ ಸ್ಥಳದಲ್ಲಿ ತೆಗೆದಿದ್ದು ಇರುತ್ತದೆ. ಸದರಿ ಪೋಟೋಗಳನ್ನು ನಿ.ಪಿ-3 ಮತ್ತು ನಿ.ಪಿ-4 ಅಂತಾ ಗುರ್ತಿಸಲಾಯಿತು. ಸದರಿ ಎರಡು ಪೋಟೋಗಳಲ್ಲಿ ನನ್ನ ಭಾವ ಚಿತ್ರ ಇದೆ ಮತ್ತು ಆ ಪೋಟೋಗಳಲ್ಲಿ ಕಾಣುವ ಮನೆ ನಮ್ಮದು ಇದೆ. ಆರೋಪಿಯು ಆ ದಿನ ನನ್ನ ತೊಡೆಗೆ ಚುಚ್ಚಿದ ಚಾಕುವನ್ನು ನೋಡಿದರೆ ಗುರ್ತಿಸುತ್ತೇನೆ.

3. ಸರ್ಕಾರಿ ಅಬಿಯೋಜಕರು ಚಾಕು ಸೀಲ್ಡ ಬಟ್ಟೆಯಲ್ಲಿದ್ದು ಅದನ್ನು ಬಿಚ್ಚಲು ಪರವಾನಿಗೆ ಕೋರಿರುತ್ತಾರೆ, ಪರವಾನಿಗೆ ನೀಡಲಾಯಿತು. ಈ ನನಗೆ ತೋರಿಸುತ್ತಿರುವ ಚಾಕು ಅದೇ ಇರುತ್ತದೆ. ಸದರಿ ಚಾಕುವನ್ನು ಮು.ಮಾ-1 ಅಂತಾ ಗುರ್ತಿಸಲಾಯಿತು. ಆ ರೀತಿ ಆರೋಪಿಯು ನನ್ನ ತೊಡೆಗೆ ಚಾಕು ಚುಚ್ಚಿದ್ದರಿಂದ ಬಟ್ಟೆ ರಕ್ತ ಆಗಿತ್ತು, ಆ ಬಟ್ಟೆಗಳನ್ನು ಪೋಲೀಸರು ತೆಗೆದುಕೊಂಡಿದ್ದಾರೆ. ಸರ್ಕಾರಿ ಅಬಿಯೋಜಕರು ಸದರಿ ಬಟ್ಟೆಗಳು ಸೀಲ್ಡ ಆದ ಕವರನಲ್ಲಿದ್ದು ಅವುಗಳನ್ನು ಬಿಚ್ಚಲು ಪರವಾನಿಗೆ ಕೋರಿರುತ್ತಾರೆ, ಪರವಾನಿಗೆ ನೀಡಲಾಯಿತು. ಈಗ ನಾನು ನೋಡುತ್ತಿರುವ ತಿಳಿ ಹಸಿರು ಬಣ್ಣದ ಟಾಪ್, ಬಿಳಿ ಮತ್ತು ಕರಿ ಬಣ್ಣದ ಪ್ಯಾಂಟ, ಕರಿ ಬಣ್ಣದ ವೇಲ್, ಮೈರುನ ಬಣ್ಣದ ಅಂಡರ ವೇರ್, ಕರಿ ಬಣ್ಣದ ಬ್ರಾ ಅವೇ ಇರುತ್ತವೆ. ಅವುಗಳನ್ನು ಮು.ಮಾ-2 ರಿಂದ ಮು.ಮಾ-6 ಅಂತಾ ಕ್ರಮವಾಗಿ ಗುರ್ತಿಸಲಾಯಿತು. ಸದರಿ ಬಟ್ಟೆಗಳನ್ನು ನನ್ನ

ತಂದೆ ಪೋಲೀಸರಿಗೆ ಕೊಟ್ಟಿದ್ದಾರೆ. ನಾನು ದೂರು ಕೊಟ್ಟ ನಂತರ ಮತ್ತೆ ಪೋಲೀಸರು ನನ್ನ ಪುನಃ ಹೇಳಿಕೆಯನ್ನು ಪಡೆದಿದ್ದಾರೆ. ಆಗ ಪೋಲೀಸರು ಠಾಣೆಯಲ್ಲಿ ನನಗೆ ಆರೋಪಿಯನ್ನು ತೋರಿಸಿದ್ದಾರೆ. ಘಟನೆ ದಿನ ಆರೋಪಿಯು ಕರಿ ಬಣ್ಣದ ಜರ್ಕಿನ, ನೀಲಿ ಬಣ್ಣದ ಟೀ-ಶರ್ಟ ಮತ್ತು ಜೀನ್ಸ ಪ್ಯಾಂಟ ಹಾಕಿದ್ದನು. ಸರ್ಕಾರಿ ಅಬಿಯೋಜಕರು ಸದರಿ ಬಟ್ಟೆಗಳು ಸೀಲ್ಡ ಕವರನಲ್ಲಿದ್ದು ಅವುಗಳನ್ನು ಬಿಚ್ಚಲು ಪರವಾನಿಗೆ ಕೋರಿರುತ್ತಾರೆ, ಪರವಾನಿಗೆ ನೀಡಲಾಯಿತು. ಈಗ ನಾನು ನೋಡುತ್ತಿರುವ ಕರಿ ಬಣ್ಣದ ಜರ್ಕಿನ, ನೀಲಿ ಬಣ್ಣದ ಟೀ-ಶರ್ಟ ಮತ್ತು ಜೀನ್ಸ ಪ್ಯಾಂಟಗಳು ಅವೇ ಇರುತ್ತವೆ. ಅವುಗಳನ್ನು ಮು.ಮಾ-7 ರಿಂದ ಮು.ಮಾ-9 ಅಂತಾ ಕ್ರಮವಾಗಿ ಗುರ್ತಿಸಲಾಯಿತು.

ಈ ವೇಳೆಗೆ ಆರೋಪಿಯು ಹೊಸ ವಕೀಲರನ್ನು ನೇಮಕ ಮಾಡಿಕೊಳ್ಳುತ್ತೇನೆ ಅಂತಾ ಹೇಳಿ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ, ಸಮಯ ನೀಡಿ ಪಾಟೀ ಸವಾಲನ್ನು ಮುಂದುಡಲಾಯಿತು.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಹೇಳಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿದೆ.)

ಓ ಹೇ ಕೇ ಸರಿ ಇದೆ.

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಧಾರವಾಡ.